# ಪ್ರಜಾಪ್ರಭುತ್ವ ಮೂಲಬೇರುಗಳು: ಭಾಗ ೩
# ನಗರ ಪ್ರದೇಶದ ಸ್ಥಳೀಯ ಸರ್ಕಾರ

ಅಧ್ಯಾಯ ೧೨

"ಪೂರ್ಣ ಪ್ರಮಾಣದ ಸ್ಥಳೀಯ ಸಂಸ್ಥೆಯನ್ನು ತಕ್ಷಣ ರಚಿಸಬೇಕು ಎಂಬುವುದನ್ನು ನಾನು ಬಯಸುತ್ತೇನೆ.  ಇದರಿಂದ ಜನರು ನಿಜವಾಗಿಯೂ ಆಡಳಿತ ಎಂದರೇನು?, ಮತದಾನದ ಹಕ್ಕು ಎಂದರೇನು? ಅಧಿಕಾರಗಳು ಯಾವುವು? ಹಕ್ಕುಗಳು ಯಾವುವು? ಒಂದು ಸಣ್ಣ ಪ್ರದೇಶದಲ್ಲಿ, ತಮ್ಮ ಸ್ವಂತ ಪಟ್ಟಣದಲ್ಲಿ,  ಹಳ್ಳಿಗಳಲ್ಲಿ ಲಭ್ಯವಿರುವ ಸವಲತ್ತುಗಳಲ್ಲಿ ಯಾವುವು ಎಂಬುದನ್ನು ತಿಳಿದುಕೊಳ್ಳಬಹುದು."

- ರುಸ್ತುಂ ಕೆ.ಸಿಧ್ವಾ, ಸಂವಿಧಾನ ರಚನಾ ಸಭೆಯ ಸದಸ್ಯ
(೧೩ ಅಕ್ಟೋಬರ್ ೧೯೪೯, ಸಂವಿಧಾನ ರಚನಾ ಸಭೆಯ ಚರ್ಚೆಗಳ ಸಮಯದಲ್ಲಿ)

ಚಿತ್ರ ೧೨.೧. ಗ್ರೇಟರ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಮೂಲತಃ 'ಬಾಂಬೆ ಮುನ್ಸಿಪಲ್ ಕಾರ್ಪೊರೇಷನ್') ಅನ್ನು ೧೮೬೫ ರಲ್ಲಿ ಕಟ್ಟಲಾಗಿದೆ.



## ಕೆಲವು ಪ್ರಮುಖ ಪ್ರಶ್ನೆಗಳು ?

೧. ನಗರ ಸಭೆಯ ಪ್ರಮುಖ ಸಂಸ್ಥೆಗಳಾವವು? ಮತ್ತು ಅವುಗಳ ಕಾರ್ಯಗಳೇನು?

೨. ಆಡಳಿತ/ಸರ್ಕಾರ ಮತ್ತು ಪ್ರಜಾಪ್ರಭುತ್ವದಲ್ಲಿ ಅವುಗಳ ಮಹತ್ವವೇನು?

0681CH12

## ಪರಿಚಯ

[redacted]

ಪ್ರಜಾಪ್ರಭುತ್ವದಲ್ಲಿ ಉತ್ತಮ ಆಡಳಿತವು ನಾಗರಿಕರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ ಎಂದು ಹಿಂದಿನ ಅಧ್ಯಾಯಗಳು ನಮಗೆ ತೋರಿಸಲಾಗಿದೆ. ಇದರಿಂದಾಗಿ ಅವರು ಗ್ರಾಮೀಣ, ನಗರ, ರಾಜ್ಯ ಅಥವಾ ರಾಷ್ಟ್ರೀಯ ಮಟ್ಟದಲ್ಲಿ ತಮ್ಮ ದೇಶದ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು. ಇದು **ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವದ** ವಿಶಾಲ ಪರಿಕಲ್ಪನೆಯಾಗಿದೆ.

ನಾವು ವ್ಯವಸ್ಥೆಯ ಮೂಲಭೂತ ಅಂಶಗಳನ್ನು ಗ್ರಾಮೀಣ ಸನ್ನಿವೇಶದಲ್ಲಿ ನೋಡಿದ್ದೇವೆ. ನಗರ ಸನ್ನಿವೇಶದಲ್ಲಿ ಇದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಾವೀಗ ನೋಡೋಣ. ಎರಡನೆಯದು ಸಾಮಾನ್ಯವಾಗಿ ಮೊದಲಿಗಿಂತ ಹೆಚ್ಚು ಸಂಕೀರ್ಣ ಮತ್ತು ವೈವಿಧ್ಯಮಯವಾಗಿರುತ್ತದೆ. ನಗರ ಆಡಳಿತ ವ್ಯವಸ್ಥೆಯು ಹೆಚ್ಚು ಸಂಕೀರ್ಣವಾಗಿದೆ ಎಂದು ಅರಿಯಬಹುದು. ಆದರೂ ಅದರ ಮೂಲ ತತ್ವಗಳಿಗೆ ನಮ್ಮನ್ನು ಸೀಮಿತಗೊಳಿಸುತ್ತೇವೆ.

### ನಾವೀಗ ಅನ್ವೇಷಿಸೋಣ

[redacted]

→ ಕೋಲ್ಕತ್ತಾ, ಚೆನ್ನೈ ಅಥವಾ ಮುಂಬೈನಂತಹ ನಗರವು ಹಳ್ಳಿ ಅಥವಾ ಪಟ್ಟಣಕ್ಕಿಂತ ಹೆಚ್ಚು ಸಂಕೀರ್ಣ ಮತ್ತು ವೈವಿಧ್ಯಮಯವಾಗಿದೆ ಏಕೆ?

→ ನಿಮ್ಮ ಸಹಪಾಠಿಗಳೊಂದಿಗೆ, ನಿಮಗೆ ಪರಿಚಿತವಾಗಿರುವ ಯಾವುದೇ ನಗರದಲ್ಲಿ ವಾಸಿಸುವ ವೈವಿಧ್ಯಮಯ ಸಮುದಾಯಗಳ ಪಟ್ಟಿಯನ್ನು ಮಾಡಿ. ನೀವು ಎಷ್ಟು ಪಟ್ಟಿ ಮಾಡಲು ಸಾಧ್ಯವಾಯಿತು? ಪಟ್ಟಿಯಲ್ಲಿ ನೀವು ಇನ್ನೂ ಏನನ್ನು ಗಮನಿಸುತ್ತೀರಿ?

ನಾವು ನಗರ ಪ್ರದೇಶಗಳಲ್ಲಿ ಆಡಳಿತ ಮತ್ತು ಆಡಳಿತವನ್ನು ಕಂಡುಕೊಳ್ಳಲು ಮೊದಲು ಚಿತ್ರ ೧೨.೨ ರಲ್ಲಿ ಚಿತ್ರಿಸಿದಂತೆ ಗ್ರಾಮೀಣದಿಂದ ರಾಷ್ಟ್ರೀಯದವರೆಗೆ ಭಾರತೀಯ ಆಡಳಿತ ವ್ಯವಸ್ಥೆಯನ್ನು ಒಟ್ಟಾರೆಯಾಗಿ ನೋಡಲು ಇದು ಸಹಾಯ ಮಾಡುತ್ತದೆ. ಪಿರಮಿಡನ ತಳಭಾಗವು ಸ್ಥಳೀಯ ಮಟ್ಟವಾಗಿದ್ದು ಜನರಿಗೆ ಹತ್ತಿರವಾಗಿದೆ. ಆದರೆ ಮೇಲ್ಭಾಗವು ರಾಷ್ಟ್ರೀಯ ಮಟ್ಟವಾಗಿದೆ. ಅಧ್ಯಾಯ ೧೧ ರಲ್ಲಿ ನಾವು ಪಿರಮಿಡನ ಎಡಭಾಗವನ್ನು ಅಧ್ಯಯನ ಮಾಡಿದೇವು; ನಾವು ಈಗ ಬಲಭಾಗವನ್ನು ನೋಡೋಣ.

© NCERT not to be republished




ಚಿತ್ರ ೧೨.೨

© NCERT not to be republished

## ನಾವೀಗ ಅನ್ವೇಷಿಸೋಣ

ಮೇಲಿನ ಚಿತ್ರ ೧೨.೨ರಲ್ಲಿ, ಪಂಚಾಯತ ರಾಜ್ ವ್ಯವಸ್ಥೆ ಮತ್ತು ನಗರ ಸ್ಥಳೀಯ ಸರ್ಕಾರಗಳ ನಡುವೆ ಯಾವ ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ನೀವು ಗಮನಿಸುತ್ತೀರಿ?

## ನಗರ ಸ್ಥಳೀಯ ಸಂಸ್ಥೆಗಳು

ನಗರ ಪ್ರದೇಶಗಳಲ್ಲಿನ ಸ್ಥಳೀಯ ಸರ್ಕಾರಿ ರಚನೆಗಳನ್ನು 'ನಗರ ಸ್ಥಳೀಯ ಸಂಸ್ಥೆಗಳು' ಎಂದು ಕರೆಯಲಾಗುತ್ತದೆ. ಅವುಗಳ ಅಧಿಕಾರ ವಿಕೇಂದ್ರೀಕೃತವಾಗಿವೆ. ಅಂದರೆ ಉನ್ನತ ಮಟ್ಟದಲ್ಲಿ ಕೇಂದ್ರ ಪ್ರಾಧಿಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಬದಲು, ಸ್ಥಳೀಯ ಸಮುದಾಯಗಳು ತಮ್ಮ ಪ್ರದೇಶಗಳನ್ನು ಹೇಗೆ ನಿರ್ವಹಿಸಲಾಗುತ್ತದೆ. ಅವರು

ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನೇರ ಅಭಿಪ್ರಾಯವನ್ನು ಹೊಂದಿವೆ. ಇದು ಒಂದು ಪ್ರದೇಶದಲ್ಲಿ ವಾಸಿಸುವ ನಾಗರಿಕರು ಒಗ್ಗೂಡಲು ಮತ್ತು ಅವರಿಗೆ ಯಾವುದು ಉತ್ತಮ ಎಂಬುದರ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಕಾರ್ಯವಿಧಾನವಾಗಿದೆ.

ನಗರಗಳು ಮತ್ತು ಪಟ್ಟಣಗಳನ್ನು 'ವಾರ್ಡಗಳು' ಎಂದು ಕರೆಯಲಾಗುವ ಸಣ್ಣ ಘಟಕಗಳಾಗಿ ವಿಂಗಡಿಸಲಾಗಿದೆ. ವಾರ್ಡ್ ಸಮಿತಿಗಳು ಆರೋಗ್ಯ ಶಿಬಿರಗಳನ್ನು ನಡೆಸುವುದು, ಏಕ-ಬಳಕೆಯ ಪ್ಲಾಸ್ಟಿಕ್ ಉಪಯೋಗಿಸುವ ವಿರುದ್ಧ ಅಭಿಯಾನವನ್ನು ಆಯೋಜಿಸುವುದು ಮುಂತಾದ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡುತ್ತವೆ. ನೀರಿನ ಸೋರಿಕೆ, ಮುಚ್ಚಿದ ಚರಂಡಿ, ಹಾನಿಗೊಳಗಾದ ರಸ್ತೆ ಇತ್ಯಾದಿ ಯಾವುದೇ ಹಾನಿಗಳಾಗಿದ್ದರೆ ಅವುಗಳ ಮೇಲೆ ಕಣ್ಣಿಡುತ್ತಾವೆ. ಮತ್ತು ಅಂತಹ ಸಮಸ್ಯೆಗಳನ್ನು ಅಧಿಕಾರಿಗಳಿಗೆ ವರದಿ ಮಾಡುತ್ತಾರೆ. ಆದಾಗ್ಯೂ, ವಾರ್ಡಗಳ ನಿಖರವಾದ ಕಾರ್ಯನಿರ್ವಹಣೆಯು ಅವರು ಮಾಡುವ ನಿಯಮಗಳನ್ನು ಅವಲಂಬಿಸಿ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.

[redacted] [redacted]

[redacted] [redacted]

ಒಟ್ಟಾರೆಯಾಗಿ, ನಗರ ಸ್ಥಳೀಯ ಸಂಸ್ಥೆಗಳು ಮೂಲಸೌಕರ್ಯಗಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು, ಸ್ಮಶಾನವನ್ನು ನಿರ್ವಹಿಸುವುದು, ಕಸ ಸಂಗ್ರಹಣೆ ಮತ್ತು ವಿಲೇವಾರಿ, ಸರ್ಕಾರಿ ಯೋಜನೆಗಳ ಅನುಷ್ಠಾನವನ್ನು ಪರಿಶೀಲಿಸುವುದು, ಸ್ಥಳೀಯ ತೆರಿಗೆಗಳು ಮತ್ತು ದಂಡಗಳನ್ನು ಸಂಗ್ರಹಿಸುವುದು ಮುಂತಾದ ಕಾರ್ಯಗಳಿಗೆ ಜವಾಬ್ದಾರಿಯಾಗಿರುತ್ತವೆ. ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಯೋಜಿಸುವಲ್ಲಿ ಅಗ ಪ್ರಮುಖ್ಯ ಪಾತ್ರವನ್ನು ಹೊಂದಿರುತ್ತವೆ. ಆದ್ಯಾಗೂ ಈ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗಬೇಕಾದರೆ ನಗರದಲ್ಲಿ ವಾಸಿಸುವ ಜನರು ತಮ್ಮ ಕರ್ತವ್ಯಗಳನ್ನು ಸಹ ನಿರ್ವಹಿಸಬೇಕು. ಅಂದರೆ ಅವರು ತಮ್ಮ ಪ್ರದೇಶದ ಬಗ್ಗೆ



© NCERT not to be republished

ಕಾಳಜಿಯನ್ನು ತೋರಿಸಬೇಕು (ನೆನಪಿಡಿ: ಇದು ಪ್ರಜಾಪ್ರಭುತ್ವದಲ್ಲಿ **ಪಾಲ್ಗೊಳ್ಳುವಿಕೆಯ** ಭಾಗವಾಗಿದೆ). ಉದಾಹರಣೆಗೆ ತ್ಯಾಜ್ಯ ವಿಂಗಡಣೆಗೆ ಸಂಬಂಧಿಸಿದ ಸೂಚನೆಗಳನ್ನು ಜನರು ಎಚ್ಚರಿಕೆಯಿಂದ ಅನುಸರಿಸಿದರೆ ಕಸ ಸಂಗ್ರಹಣೆ ಸುಲಭವಾಗುತ್ತದೆ. ಅವರು ಬೀದಿಯಲ್ಲಿ ನೀರಿನ ಸೋರಿಕೆಯನ್ನು ಗಮನಿಸಿದರೆ, ಅದನ್ನು ತಕ್ಷಣ ವರದಿ ಮಾಡುವುದರಿಂದ ಅಮೂಲ್ಯವಾದ ನೀರು ಮತ್ತಷ್ಟು ವ್ಯರ್ಥವಾಗುವುದನ್ನು ತಡೆಯಲು ಸಹಾಯವಾಗುತ್ತದೆ.

## ನಾವೀಗ ಅನ್ವೇಷಿಸೋಣ

ಜವಾಬ್ದಾರಿಯುತ ನಾಗರಿಕರು ನಗರದ ತಮ್ಮ ಪ್ರದೇಶಕ್ಕೆ ಸಹಾಯ ಮಾಡಲು ತೆಗೆದುಕೊಳ್ಳಬಹುದಾದ ಇನ್ನೂ ನಾಲ್ಕು ಅಥವಾ ಐದು ಕ್ರಮಗಳ ಬಗ್ಗೆ ನೀವು ಯೋಚಿಸಬಹುದೇ?




ಚಿತ್ರ ೧೨.೩. ಮದ್ರಾಸ್ ಕಾರ್ಪೊರೇಷನ್

ಮದ್ರಾಸ್ ಕಾರ್ಪೊರೇಷನ್ (ಈಗ ಗ್ರೇಟರ್ ಚೆನ್ನೈ ಕಾರ್ಪೊರೇಷನ್) ೨೯ ನೇ ಸೆಪ್ಟೆಂಬರ್ ೧೬೮೮ ರಂದು ಸ್ಥಾಪನೆಯಾಯಿತು. ಇದು ಭಾರತದ ಅತ್ಯಂತ ಹಳೆಯ ಪುರಸಭೆಯಾಗಿದೆ. ಈಸ್ಟ್ ಇಂಡಿಯಾ ಕಂಪನಿಯು 'ಫೋರ್ಟ್ ಸೇಂಟ್ ಜಾರ್ಜ್' ಪಟ್ಟಣ ಮತ್ತು ಕೋಟೆಯಿಂದ ೧೬ ಕಿ.ಮೀ ಒಳಗಿನ ಎಲ್ಲಾ ಪ್ರದೇಶಗಳನ್ನು ನಿಗಮವಾಗಿ ರಚಿಸುವ ಆದೇಶವನ್ನು ಹೊರಡಿಸಿತು. ೧೭೯೨ ರ ಸಂಸದೀಯ ಕಾಯ್ದೆಯು ಮದ್ರಾಸ್ ಕಾರ್ಪೊರೇಷನಗೆ ನಗರದಲ್ಲಿ ಪುರಸಭೆಯ ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ನೀಡಿತು. ಆಗ ಪುರಸಭೆಯ ಆಡಳಿತವು ಸರಿಯಾಗಿ ಪ್ರಾರಂಭವಾಯಿತು.

| ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ ಅಡಿಯಲ್ಲಿನ ಸೇವೆಗಳು | | | |
|---|---|---|---|
| ಆಸ್ತಿ ತೆರಿಗೆ | ನೀರಿನ ಶುಲ್ಕ | ಘನ ತ್ಯಾಜ್ಯ ನಿರ್ವಹಣೆ | ವ್ಯಾಪಾರ, ಹೋರ್ಡಿಂಗ್‌ಗಳು, ವ್ಯಾಪಾರ ಪರವಾನಗಿಗಳು |
| ಸಿ.ಆರ್.ಎಂ — ವಿವಾಹ ಪ್ರಮಾಣಪತ್ರ | ಸಿ.ಆರ್.ಎಂ — ಅಗ್ನಿಶಾಮಕದಳ ಸೇವೆಗಳು | ಸಿ.ಆರ್.ಎಂ — ವಿವಿಧ ಪರವಾನಗಿಗಳು | ಸಿ.ಆರ್.ಎಂ — ನೀರಿನ ಟ್ಯಾಂಕರ್, ಅವಶೇಷಗಳ ತೆರವು |
| ಮರ ಕಡಿಯುವಿಕೆ ಮತ್ತು ಮರಗಳ ಸಾಗಣೆ | | ಸಿ.ಆರ್.ಎಂ — ಕುಂದುಕೊರತೆಗಳು | |

| ಸಿ.ಆರ್.ಎಂ: ವಿನಂತಿಯ ಮೇರೆಗೆ ಸೇವೆಗಳು | | | | | |
|---|---|---|---|---|---|
| ನೀರಿನ ಟ್ಯಾಂಕರ್ | ಸೆಪ್ಟಿಕ್ ಟ್ಯಾಂಕರ್ | ಸಭಾಂಗಣ | ಅಂತ್ಯಕ್ರಿಯೆಯ ವಾಹನ | ಸಂಚಾರಿ ಶೌಚಾಲಯ | ಆಂಬ್ಯುಲೆನ್ಸ್ |

* ಸಿ.ಆರ್.ಎಂ: ನಾಗರಿಕ ಸಂಬಂಧ ನಿರ್ವಹಣೆ.

(ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ ನೀಡುವ ಸೇವೆಗಳ ಪಟ್ಟಿಯನ್ನು ಇಲ್ಲಿ ಸರಳೀಕರಿಸಲಾಗಿದೆ.)

ಚಿತ್ರ ೧೨.೪. ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ ಅಡಿಯಲ್ಲಿ ಸೇವೆಗಳು

© NCERT not to be republished

## ಇದರ ಕುರಿತು ಆಲೋಚಿಸಿ

ಮಧ್ಯಪ್ರದೇಶದ ಇಂದೋರ್ ಸತತ ಏಳು ವರ್ಷಗಳ ಕಾಲ ಸ್ವಚ್ಛ ಸರ್ವೇಕ್ಷಣ್ ಸರ್ಕಾರದ ಯೋಜನೆಯಡಿ ಭಾರತದ ಅತ್ಯಂತ ಸ್ವಚ್ಛ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸಾಧನೆಯಲ್ಲಿ ಇಂದೋರ್ ನಾಗರಿಕರ ಪಾತ್ರವೇನು?

ನಾವು ನೋಡುವಂತೆ ಚೆನ್ನೈ ಮತ್ತು ಇಂದೋರ್ ತಮ್ಮ ನಗರ ಸಂಸ್ಥೆಗಳ ಮೇಲ್ಭಾಗದಲ್ಲಿ ಸ್ವಚ್ಛ ಸರ್ವೇಕ್ಷಣ್ ಮುನ್ಸಿಪಲ್ ಕಾರ್ಪೊರೇಷನ್ ಧ್ಯೇಯ ಹೊಂದಿವೆ. ೧೦ ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನಗರಗಳಲ್ಲಿ ಮಾತ್ರ ಮುನ್ಸಿಪಲ್ ಕಾರ್ಪೊರೇಷನ್ ('ಮಹಾನಗರ ನಿಗಮ' ಎಂದೂ ಕರೆಯಲಾಗುತ್ತದೆ) ನಮ್ಮ ಅತ್ಯುನ್ನತ ಸಂಸ್ಥೆಯಾಗಿವೆ. ೧ ರಿಂದ ೧೦ ಲಕ್ಷದ ನಡುವೆ ಅತ್ಯುನ್ನತ ಸಂಸ್ಥೆ ಮುನ್ಸಿಪಲ್ ಕೌನ್ಸಿಲ್ (ಇದನ್ನು 'ನಗರ ಪಾಲಿಕೆ ಎಂದೂ ಕರೆಯಲಾಗುತ್ತದೆ). ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ನಗರಗಳು ಮತ್ತು ಪಟ್ಟಣಗಳು 'ನಗರ ಪಂಚಾಯತ' ಅಥವಾ 'ಪಟ್ಟಣ ಪಂಚಾಯತ' ಅನ್ನು ಹೊಂದಿವೆ.

## ನಾವೀಗ ಅನ್ವೇಷಿಸೋಣ

→ ನಿಮ್ಮ ರಾಜ್ಯದಿಂದ ಕೆಲವು, ನೆರೆಯ ರಾಜ್ಯಗಳಿಂದ ಕೆಲವು ನಗರಗಳನ್ನು ಆಯ್ಕೆ ಮಾಡಿ. ಇವುಗಳಲ್ಲಿ ನೀವು ವಾಸಿಸುವ ನಗರ ಅಥವಾ ನಿಮ್ಮ ಪಟ್ಟಣ ಅಥವಾ ಹಳ್ಳಿಗೆ ಹತ್ತಿರವಿರುವ ನಗರ ಸೇರಿರಬಹುದು. ಅವರು ನಗರ ಪಂಚಾಯತ, ಮುನ್ಸಿಪಲ್ ಕೌನ್ಸಿಲ್ ಅಥವಾ ಮುನ್ಸಿಪಲ್ ಕಾರ್ಪೊರೇಷನ್ ಹೊಂದಿದ್ದಾರೆಯೇ ಎಂದು ನೀವು ಹೇಗೆ ಕಂಡುಹಿಡಿಯುತ್ತೀರಿ? ನಗರಗಳ ಹೆಸರುಗಳು ಮತ್ತು ಅವುಗಳಲ್ಲಿ ಪ್ರತಿಯೊಂದೂ ಹೊಂದಿರುವ ನಗರ ಸ್ಥಳೀಯ ಸಂಸ್ಥೆಗಳ ಪ್ರಕಾರದೊಂದಿಗೆ ಕೋಷ್ಟಕವನ್ನು ರಚಿಸಿ.

→ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಚಟುವಟಿಕೆಗಳಿಗೆ ಹೇಗೆ ಧನಸಹಾಯ ಪಡೆಯುತ್ತವೆ? (ಸೂಚನೆ: ಚಿತ್ರ ೧೨.೪ ರಲ್ಲಿ ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ ನಿರ್ವಹಿಸುವ ಕಾರ್ಯಗಳ ಚಿತ್ರಗಳನ್ನು ಎಚ್ಚರಿಕೆಯಿಂದ ನೋಡಿ.) ಅವುಗಳಲ್ಲಿ ಕೆಲವು ಪಾವತಿಸಿದ ಸೇವೆಗಳಾಗಿವೆಯೇ?

ಸಮೀರ್: ಹಲೋ! ನಾನು ನಿಮ್ಮನ್ನು ಈ ಮೊದಲು ಇಲ್ಲಿ ನೋಡಿಲ್ಲ. ನೀವು ಈ ಹಳ್ಳಿಗೆ ಹೊಸಬರೇ?

ಅನಿತಾ: ಹಲೋ! ಹೌದು ನಾನು ಹತ್ತಿರದಲ್ಲೇ ವಾಸಿಸುವ ನನ್ನ ಅಜ್ಜಿಯರನ್ನು ಭೇಟಿಗಾಗಿ ಬಂದಿದ್ದೇನೆ. ನಾನು ನಗರದಿಂದ ಬಂದವಳು. ಇದು ಇಲ್ಲಿಂದ ಸಾಕಷ್ಟು ಭಿನ್ನವಾಗಿದ್ದೇನೆ! ಇದು ನಗರಕ್ಕಿಂತ ಸಾಕಷ್ಟು ಭಿನ್ನವಾಗಿದೆ!

ಸಮೀರ್: ಸಮೀರ್: ಓಹ್, ನಿಜವಾಗಿಯೂ? ನಗರದಲ್ಲಿ ಇದು ಹೇಗಿದೆ?

© NCERT not to be republished

ಅನಿತಾ: ಅಲ್ಲಿ, ಜನರ ಕಾರ್ಯನಿರತತೆ ಮತ್ತು ಜನದಟ್ಟಣೆಯಿಂದ ಕೂಡಿದೆ. ಎಲ್ಲೆಡೆ ಎತ್ತರದ ಕಟ್ಟಡಗಳಿವೆ. ಎಲ್ಲಾ ಸಮಯದಲ್ಲೂ ಅನೇಕ ಜನರು ಓಡುತ್ತಿರುತ್ತಾರೆ. ಮತ್ತು ಇಲ್ಲಿನ ಶಾಂತತೆಗೆ ಹೋಲಿಸಿದರೆ ಅದು ಗದ್ದಲದಿಂದ ಕೂಡಿದೆ. ಅಲ್ಲದೆ, ಜನರು ಹೆಚ್ಚು ಸ್ವತಂತ್ರರಾಗಿದ್ದಾರೆ. ಹೆಚ್ಚಾಗಿ ಅಲ್ಲಿ ತಮ್ಮ ನೆರೆಹೊರೆಯವರ ಬಗ್ಗೆಯೂ ತಿಳಿದಿರುವುದಿಲ್ಲ.

ಸಮೀರ್:ಹೌದಾ. ಇಲ್ಲಿ, ಪ್ರತಿಯೊಬ್ಬರೂ ಎಲ್ಲರೂ ಪರಿಚಿತರು. ಪರಸ್ಪರ ಸಹಾಯ ಮಾಡಲು ಮುಂದಾಗುತ್ತಾರೆ. ನಾವು ಹೊಲಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತೇವೆ. ಹಬ್ಬಗಳನ್ನು ಒಟ್ಟಿಗೆ ಆಚರಿಸುತ್ತೇವೆ. ಸಮುದಾಯಿಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ

ಅನಿತಾ: ಸರಿ, ನಗರದಲ್ಲಿ ಇನ್ನೂ ಸ್ವಲ್ಪ ಸಮುದಾಯ ಪ್ರಜ್ಞೆ ಇದೆ. ಮೊನ್ನೆಯಷ್ಟೇ ಭಾರೀ ಮಳೆಯಿಂದಾಗಿ ಎರಡು ಬೀದಿಗಳ ದೂರದಲ್ಲಿ ಮನೆ ಕುಸಿದಿತ್ತು. ಅವಶೇಷಗಳನ್ನು ತೆರವುಗೊಳಿಸಲು ಮತ್ತು ಒಳಗೆ ಯಾರೂ ಸಿಕ್ಕಿಬಿದ್ದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಸಹಾಯ ಮಾಡಲು ಹತ್ತಾರು ಜನರು ಎಲ್ಲೆಡೆಯಿಂದ ಜಮಾಯಿಸಿದರು.



ಸಮೀರ್: ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಸರ್ಕಾರ ಸಹಾಯ ಮಾಡುವುದಿಲ್ಲವೇ?

ಸಮೀರ್: ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಸರ್ಕಾರ ಸಹಾಯ ಮಾಡುವುದಿಲ್ಲವೇ?

ಅನಿತಾ: ಹೌದು, ಹೌದು. ವಾಸ್ತವವಾಗಿ, ನಮ್ಮನ್ನು ಮತ್ತು ನಮ್ಮ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸ್ಥಳೀಯ ಸಂಸ್ಥೆಗಳು ಮತ್ತು ಚುನಾಯಿತ ಪ್ರತಿನಿಧಿಗಳನ್ನು ನಾವು ಹೊಂದಿದ್ದೇವೆ.

ಸಮೀರ್: ಸರಿ, ಇದು ನಮ್ಮ ಗ್ರಾಮ ಪಂಚಾಯಿತಿಯಂತೆ ತೋರುತ್ತದೆ, ಕೇವಲ ದೊಡ್ಡದಾಗಿದೆ. ಸದಸ್ಯರನ್ನು ಸಹ ಆಯ್ಕೆ ಮಾಡಲಾಗುತ್ತದೆ, ಆದರೆ ಅವರೆಲ್ಲರೂ ಪರಸ್ಪರ ತಿಳಿದಿರುವುದರಿಂದ, ಹೆಚ್ಚಿನ ಜನರು ಭಾಗವಹಿಸಬಹುದು ಮತ್ತು ಗ್ರಾಮಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸಮಸ್ಯೆಗಳನ್ನು ಚರ್ಚಿಸಬಹುದು. ಕೆಲವೊಮ್ಮೆ, ಮಕ್ಕಳಾದ ನಾವು ಸಹ ಕೇಳಬಹುದು.

ಅನಿತಾ: ನಿಜವಾಗಿಯೂ? ನೀವು ಅದನ್ನು ಮಾಡುದಲ್ಲವೆ?



© NCERT not to be republished

ಸಮೀರ್: ಎಂದಿಗೂ ಇಲ್ಲ! ಒಂದು ದಿನ ಕೆಲವು ಮಕ್ಕಳು ವಿದ್ಯುತ್ ತಂತಿಯು ಅಪಾಯಕಾರಿಯಾಗಿ ಕೆಳಕ್ಕೆ ನೇತಾಡುತ್ತಿರುವುದನ್ನು ಗಮನಿಸಿದರು. ಅದು ಕಟ್ಟಡದ ಛಾವಣಿಯನ್ನು ಬಹುತೇಕ ಸ್ಪರ್ಶಿಸಿತು. ನಾವು ಅದನ್ನು ವರದಿ ಮಾಡಿದ್ದು ಮಾತ್ರವಲ್ಲದೇ. ವಿದ್ಯುತ್ ಕಂಬವನ್ನು ಸ್ವಲ್ಪ ಸ್ಥಳಾಂತರಿಸಬೇಕು ಎಂದು ನಮ್ಮ ಗ್ರಾಮ ಸಭೆಯ ಸದಸ್ಯರೊಬ್ಬರಿಗೆ ವಿವರಿಸಿದ್ದೇವೆ. ಅವರು ಅದನ್ನು ಸರಿ ಮಾಡಿದರು.

ಅನಿತಾ: ಅದ್ಭುತ! ಪ್ರಜಾಪ್ರಭುತ್ವವು ಹೀಗೆಯೇ ಕೆಲಸ ಮಾಡಬೇಕು ಎಂದು ನಾನು ಭಾವಿಸುತ್ತೇನೆ. ಇದು ನಗರದಲ್ಲಿ ಹೆಚ್ಚು ಜಟಿಲವಾಗಿ ತೋರುತ್ತದೆ. ಆದರೆ ಕಲ್ಪನೆ ಒಂದೇ ಆಗಿದೆ. ಪ್ರತಿಯೊಬ್ಬರ ಜವಾಬ್ದಾರಿಯು ಮುಖ್ಯವಾಗಿದೆ.

ಸಮೀರ್: ಹೌದು, ಹೌದು! ಕ್ಷಮಿಸಿ, ನಾನು ಮುಂದೆ ಹೋಗಬೇಕು. ಸ್ವಲ್ಪ ಶಾಪಿಂಗ್ ಮಾಡಲು ನನ್ನ ತಾಯಿಗೆ ನನ್ನ ಸಹಾಯ ಬೇಕು. ನಗರದ ಬಗ್ಗೆ ಹೇಳಿದ್ದಕ್ಕಾಗಿ ಧನ್ಯವಾದಗಳು.

ಅನಿತಾ: ನಿಮ್ಮ ಹಳ್ಳಿಯ ಬಗ್ಗೆ ಹೇಳಿದ್ದಕ್ಕೆ ಧನ್ಯವಾದಗಳು! ನಾನು ಖಂಡಿತವಾಗಿಯೂ ಸುತ್ತಲೂ ನೋಡಲಿದ್ದೇನೆ.

ಸಮೀರ್: ಸರಿ, ಬಹುಶಃ ನಾವು ಎಂದಾದರೂ ಮತ್ತೆ ಭೇಟಿಯಾಗೋಣ. ಬರ್ತೀನಿ!

## ನಾವು ಮುಂದುವರಿಯುವ ಮೊದಲು ...

→ ನಗರ ಪ್ರದೇಶಗಳಲ್ಲಿ, ವಿಕೇಂದ್ರೀಕೃತ ಆಡಳಿತವು ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ, ಇದು ನಾಗರಿಕರ ಜೀವನದ ಮೇಲೆ ಪರಿಣಾಮ ಬೀರುವ ವಿವಿಧ ಕಾರ್ಯಗಳನ್ನು ಪೂರೈಸುತ್ತದೆ.

→ ಗ್ರಾಮೀಣ ಸನ್ನಿವೇಶದಂತೆ, ನಗರ ಸ್ಥಳೀಯ ಸಂಸ್ಥೆಗಳು ಸ್ಥಳೀಯ ನಾಗರಿಕರನ್ನು ಪ್ರತಿನಿಧಿಸುವ ಚುನಾಯಿತ ಸದಸ್ಯರನ್ನು ಹೊಂದಿವೆ.

→ ಸ್ಥಳೀಯ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಸಮರ್ಥವಾಗಿವೆ ಎಂದು ಖಚಿತಪಡಿಸಿಕೊಳ್ಳಲು ನಾಗರಿಕರಿಗೆ ಕರ್ತವ್ಯಗಳಿವೆ.

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧.ನೀವು ಶಾಲೆಗೆ ಹೋಗುವಾಗ, ನೀರಿನ ಪೈಪ್ ಸೋರಿಕೆಯಾಗುತ್ತಿರುವುದನ್ನು ನೀವು ಮತ್ತು ನಿಮ್ಮ ಸ್ನೇಹಿತರು ಗಮನಿಸುತ್ತೀರಿ. ಸೋರಿಕೆಯಿಂದಾಗಿ ಸಾಕಷ್ಟು ನೀರು ವ್ಯರ್ಥವಾಗುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ನೀವು ಮತ್ತು ನಿಮ್ಮ ಸ್ನೇಹಿತರು ಏನು ಮಾಡುತ್ತೀರಿ?

೨. ನಿಮ್ಮ ಹತ್ತಿರದ ನಗರ ಸ್ಥಳೀಯ ಸಂಸ್ಥೆಯ ಸದಸ್ಯರನ್ನು ನಿಮ್ಮ ತರಗತಿಗೆ ಆಹ್ವಾನಿಸಿ. ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಅವರೊಂದಿಗೆ ಚರ್ಚಿಸಿ. ಸಭೆ ಫಲಪ್ರದವಾಗುವಂತೆ ಅವರನ್ನು ಕೇಳಲು ಪ್ರಶ್ನೆಗಳ ಒಂದು ಗುಂಪನ್ನು ಸಿದ್ಧಪಡಿಸಿ.

© NCERT not to be republished

೩. ನಿಮ್ಮ ಕುಟುಂಬದ ವಯಸ್ಕ ಸದಸ್ಯರೊಂದಿಗೆ ಚರ್ಚಿಸಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ಅವರ ನಿರೀಕ್ಷೆಗಳ ಪಟ್ಟಿಯನ್ನು ಮಾಡಿ.

೪. ಉತ್ತಮ ನಗರ ಸ್ಥಳೀಯ ಸಂಸ್ಥೆಯ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.

೫. ಗ್ರಾಮೀಣ ಪ್ರದೇಶಗಳಲ್ಲಿನ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳು ಯಾವುವು?

## ಅಭ್ಯಾಸದ ಟಿಪ್ಪಣಿಗಳು/ನೂಡಲ್ಸ್

© NCERT not to be republished

*'ನೂಡಲ್ಸ್' ಎಂಬುದು 'ಟಿಪ್ಪಣಿಗಳು ಮತ್ತು ಡೂಡಲ್ಸ್' ಗಳಿಗಾಗಿ ನಮ್ಮ ಸಂಕ್ಷಿಪ್ತ ರೂಪವಾಗಿದೆ!

